ನಡೆಸುತ್ತಿರಬಹುದೆ? ಚಳಿ ಬಂದವರಂತೆ ನಡುಗಿದನು. ಏನೇನೋ ಕಲ್ಪನೆಗಳು. ದೆವ್ವ... ಭೂತ ಕಾಣಿಸುತ್ತಿವೆ. ಭ್ರಮೆ... ಭಯದ ಭ್ರಮೆ.

* * *

ಶವಗಳ ಸಂಸ್ಕಾರ ಮುಗಿಯಿತು. ಮಾಂತ್ರಿಕ ಕಂಬನಿ ಮಿಡಿದನು. ಹೆಂಡತಿ, ಮಕ್ಕಳಿಗೆ ಅಂತಿಮ ಶ್ರದ್ಧಾಂಜಲಿ ಸಲ್ಲಿಸಿ ಸ್ಮಶಾನದಿಂದ ತಿರುಗಿದನು. ಮಧ್ಯಾಹ್ನದ ಉರಿಬಿಸಿಲು! ಗುರುಶಿಷ್ಯ ನಡೆಯುತ್ತಿದ್ದಾರೆ.

ಮದಂತ ``ಗುರುಗಳೆ... ಇದು ಯಾಕೆ ಹೀಗಾಯಿತು? ನನ್ನಿಂದ ತಡೆಯಲಾಗುತ್ತಿಲ್ಲ'' ರುದ್ರನಾಗ ಕೋಪದಿಂದ ಬುಸುಗುಡುತ್ತಲೇ ಎಲ್ಲವನ್ನೂ ಸಹ ವಿವರಿಸಿದನು. ಮದಂತ ಮಂಕಾಗಿದ್ದಾನೆ. ಅವನ ಮನಸ್ಸಿನಲ್ಲಿ ಬಿರುಗಾಳಿ ಎದ್ದಿದೆ. ಅಲ್ಲೋಲಕಲ್ಲೋಲ ಉಂಟಾಗಿದೆ. ವಾಮಚಾರ ಪವಿತ್ರವಾದ ವಿದ್ಯೆ ಎನ್ನುತ್ತಾರೆ. ಅದು ನಿಜವೆ?

ಒಂದು ವೇಳೆ ಇದು ನಿಜವೇ ಆಗಿದ್ದರೆ ನನ್ನ ಗುರು ಮಾಂತ್ರಿಕನಂತಹವರು ಇದನ್ನು ಈ ರೀತಿ ಸ್ವಾರ್ಥಕ್ಕಾಗಿ ಬಳಸುತ್ತಿದ್ದಾರಲ್ಲ. ಇದು ಸರಿಯೆ? ಗುರುವಿನ ಮಾತು ಮೀರಲಾರದೆ ನಾನು ಎರಡು ಕೈಕರಣ ಮಾಡಿದ್ದೇನೆ. ನನ್ನಿಂದ ಹಸಿರು ಗಿಡಗಳ ರಾಮಯ್ಯನ ಇಬ್ಬರು ಮಕ್ಕಳು ಸತ್ತರು. ಈಗ ಈ ಮೂವರು. ಐದು ಮಂದಿಯ ಸಾವು. ಸತ್ತವನಿಗೆ ಜೀವ ತುಂಬಲು ವಾಮಾಚಾರದಿಂದ ಸಾಧ್ಯವಿಲ್ಲ ಎಂದ ಮೇಲೆ ಒಬ್ಬನನ್ನು ಸಾಯಿಸಬಾರದು. ಅದು ತಪ್ಪು.

ಈ ತಪ್ಪನ್ನು ಎರಡು ಸಲ ಮಾಡಿದ್ದೇನೆ. ಈ ಗುರು ಮಾಂತ್ರಿಕ ನನ್ನಿಂದ ಆಗಾಗ ಈ ರೀತಿಯ ತಪ್ಪುಗಳನ್ನು ಮಾಡಿಸುತ್ತಲೇ ಇರುತ್ತಾನೆ. ನಾನೇನು ಮಾಡಲಿ? ಗುರುವಿನ ಮಾತು ಮೀರಬಾರದು. ಅದರಂತೆ ನಡೆದರೆ ನನ್ನಿಂದ ಇನ್ನೂ ಎಷ್ಟು ಮಂದಿ ಸಾಯುತ್ತಾರೋ ಏನೋ? ರುದ್ರನಾಗ ಕೋಪದಿಂದ ಅಬ್ಬರಿಸುತ್ತಾ ``ಮದಂತ... ನೀನು ಇವತ್ತು ರಾತ್ರಿಯ ಕೈಕರಣಕ್ಕೆ ಪೂಜಾ ಸಾಮಾಗ್ರಿಗಳನ್ನು ಸಿದ್ಧಪಡಿಸು. ಈ ಸಲ ನಾನೇ ಮಾಡುತ್ತೇನೆ...''

'ಅಂದರೆ... ಅಂದರೆ....'

'ನನ್ನ ಸಂಸಾರದವರನ್ನು ನನ್ನಿಂದಲೇ ಕೊನೆಗಾಣಿಸಿರುವ ನನ್ನ ತಂಗಿ ಮತ್ತು ಅವಳ ಗಂಡ ನಾಳೆಯ ಸೂರ್ಯನನ್ನು ನೋಡಬಾರದು...' ಆಶ್ಚರ್ಯವೇನೂ ಆಗಲಿಲ್ಲ. ಇದನ್ನು ನಿರೀಕ್ಷೆ ಮಾಡಿದ್ದನು ಮದಂತ. ಆದರೆ ಒಂದೇ ಒಂದು ಸಮಾಧಾನಕರ ಸಂಗತಿ ಎಂದರೆ ಕೈಕರಣ ಮಾಡಲು ಮದಂತನಿಗೆ ಹೇಳಿರಲಿಲ್ಲ.

ರುದ್ರನಾಗ ಕೆಳ ತುಟಿಯನ್ನು ಕಚ್ಚುತ್ತಾ 'ಮದಂತ... ನನ್ನ ತಂಗಿ ಮತ್ತು ಅವಳ ಗಂಡನ ಮೇಲೆ ಅದೇ ಕಾಪಾಲಚಂಡನನ್ನು ಪ್ರಯೋಗಿಸುತ್ತೇನೆ. ನೀನು ಎಲ್ಲಾ ಸಿದ್ಧತೆಗಳನ್ನು ಮಾಡು.'

ಮದಂತ ತಲೆಯಾಡಿಸಿದನು. ರುದ್ರನಾಗ ಮನೆಗೆ ಬಂದ ಕೂಡಲೇ ಆತುರದಿಂದ ಹುಡುಕಾಡುತ್ತಿದ್ದಾಗ ಕಂಡಿತು. ತಂಗಿಯ ವ್ಯಾನಿಟಿ ಬ್ಯಾಗಿನಲ್ಲಿ ಇದ್ದ ಉದ್ದನೆಯ ಬಾಚಣಿಗೆ... ಅದರಲ್ಲಿ ಸೇರಿಕೊಂಡಿತ್ತು. ಉದ್ದನೆಯ ಹತ್ತಾರು ತಲೆಯ ಕೂದಲುಗಳು.

ಮನೆಯ ಮೂಲೆಯಲ್ಲಿ ಕಂಡು ಬಂದಿತು ಮನೋಹರನ ಷೂಗಳು. ಅದರಲ್ಲಿ ಕಾಲುಚೀಲಗಳಿದ್ದವು. ಗಬ್ಬುವಾಸನೆ ಬರುತ್ತಿದ್ದ ಸಾಕ್ಸ್. ರುದ್ರನಾಗ ನಗುತ್ತಿದ್ದಾನೆ. ನಗುವಿನಲ್ಲಿ ಕ್ರೂರತೆ. ಮಹಾ ಪೈಶಾಚಿಕತೆ. ಇನ್ನು ಈ ಭೂಮಂಡಲದಲ್ಲಿ ಎಲ್ಲಿಯೇ ಇದ್ದರೂ ಸಹ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಈ ರಾತ್ರಿಯೇ ನಿಮಗೆ ಕೊನೆ.

ಹೆಜ್ಜೆಗಳ ಶಬ್ದ ಕೇಳಿ ಬೆಚ್ಚಿಬಿದ್ದು ಹಿಂತಿರುಗಿದನು ರುದ್ರನಾಗ. ಯಾರೋ ಸರಸರನೆ ಅಲ್ಲಿಂದ ಮರೆಯಾದರು. ರುದ್ರನಾಗ ಹೊರಗೆ ಬಂದು ನೋಡಿದನು. ಯಾರೂ ಕಾಣಿಸಲಿಲ್ಲ. ರುದ್ರನಾಗ ಒಬ್ಬ ಮುಖ್ಯ ಶತ್ರುವನ್ನೇ ಪೂರ್ತಿಯಾಗಿ ಮರೆತಿದ್ದನು.

ರಾತ್ರಿ ಎಂಟು ಗಂಟೆಯ ಸಮಯ. ಸ್ಮಶಾನದ ದಕ್ಷಿಣ ದಿಕ್ಕು. ಅಗ್ನಿಕುಂಡ ಉರಿಯುತ್ತಿದೆ. ಮಾಂತ್ರಿಕ ಮದಂತ ಈಗ ಬೆತ್ತಲೆಯಾಗಿ ನಿಂತುಕೊಂಡು ಮಂತ್ರವನ್ನು ಹೇಳುತ್ತಿದ್ದಾನೆ.

ಒಂಟಿಕಾಲಿನ ಧ್ಯಾನ.

ಮಾತ್ರೋತ್ಕರ್ಷದ ಪರಕಾಷ್ಠೆ! ಮದಂತ ಏನು ಮಾಡುತ್ತಿದ್ದಾನೆ? ಅಲ್ಲಿ ಅವನ ಗುರು ಇರಲಿಲ್ಲ. ಮದಂತ ಯಾರ ಮೇಲೂ ಸಹ ಕೈಕರಣ ಮಾಡುತ್ತಿಲ್ಲ. ಪಂಚಭೂತಗಳನ್ನು ಪ್ರಾರ್ಥಿಸುತ್ತಿದ್ದಾನೆ. ಪಂಚ ಶಕ್ತಿಗಳನ್ನು ಕರೆಯುತ್ತಿದ್ದಾನೆ! ರಕ್ತತರ್ಪಣ ನೀಡುತ್ತಿದ್ದಾನೆ. ಈಗ ತನಗೆ ಮಾಂತ್ರಿಕ ವಿದ್ಯೆಯನ್ನು ಕಲಿಸಿರುವ ಗುರುವನ್ನು ಪ್ರಾರ್ಥಿಸಿದನು.

ಮಾಂತ್ರಿಕ ಜಗತ್ತಿನಲ್ಲಿ ಅಮೋಘ ಸಾಧನೆ ಮಾಡಿ ಇಹಲೋಕ ತ್ಯಜಿಸಿ ಪ್ರೇತರೂಪದಲ್ಲಿರುವ ಮಾಂತ್ರಿಕರನ್ನು ಪೂಜಿಸಿದನು. ಈಗಲೇ ಕೊನೆಯ ಹಂತ. ಅದನ್ನು ಸಹ ಮುಗಿಸಿದನು. ಕೊನೆಗೆ ತರ್ಪಣ ನೀಡಿದನು. ಸಂಕಲ್ಪ ಮಾಡಿದನು ಮದಂತ. ಆ ಕೂಡಲೇ ಆಗಸದಲ್ಲಿ ಏನೋ ಹೊಳೆಯಿತು.

ಮದಂತನ ಸಂಕಲ್ಪ ಏನು?

* * *

ಬಿರಬಿರನೆ ಹೆಜ್ಜೆ ಇಡುತ್ತಾ ಈಗ ಸ್ಮಶಾನದ ಕಡೆ ನಡೆಯುತ್ತಿದ್ದಾನೆ. ರುದ್ರನಾಗ ಇಡುತ್ತಿರುವ ಒಂದೊಂದು ಹೆಜ್ಜೆಯೂ ಸಹ ಬಿರುಸಿನಿಂದ ಕೂಡಿದೆ. ಕೋಪ... ದ್ವೇಷ! ಹೆಂಡತಿ ಮತ್ತು ಮಕ್ಕಳ ಸಾವಿನ ಸನ್ನಿವೇಶ ನೆನಪಾಗಿ ಮೈ ನಡುಗುತ್ತಿದೆ. ಎಂಥ ಮೋಸ. ನನ್ನಿಂದಲೇ ನಾನು ಕಲಿತ ವಿದ್ಯೆಯಿಂದಲೇ ಅವರಿಗೆ ಸಾವನ್ನು ತಂದಿದ್ದಾನೆ. ನಂಬಿಸಿ ಮೋಸ ಮಾಡಿದ್ದಾನೆ. ಅವರು ಮಾಡಿರುವ ಅನ್ಯಾಯಕ್ಕೆ ಈಗಾಗಲೇ ಶಿಕ್ಷೆ ಆಗಿದೆ. ಅರುಂಧತಿ ಹೆತ್ತ ಮಗು ತೋಳದಿಂದಾಗಿ ಅವಳಿಂದ ದೂರ ಆಗಿದೆ.

ಈ ಶಿಕ್ಷೆ ಸಾಲದು! ರಕ್ತಕಾರಿಕೊಂಡು ಸಾಯಬೇಕು. ನನ್ನ ಹೆಂಡತಿಮಕ್ಕಳ ಮೇಲೆ ಕಾಪಾಲ ಮತ್ತು ಚಂಡನನ್ನು ಪ್ರಯೋಗಿಸಲಾಗಿತ್ತು! ಪುನಃ ಅವುಗಳನ್ನೇ ಪ್ರಯೋಗಿಸುತ್ತೇನೆ. ಯಮ ಹಿಂಸೆ ಅನುಭವಿಸಿ ಸಾಯಲಿ.

ಹೆಜ್ಜೆಗಳ ಶಬ್ದ! ಯಾರೋ... ಯಾರೋ ಬರುತ್ತಿದ್ದಾರೆ. ಗಕ್ಕನೆ ನಿಂತನು ಮಾಂತ್ರಿಕ. ಯಾರೋ ತನ್ನನ್ನು ಮನೆಯ ಹತ್ತಿರದಿಂದಲೇ ಹಿಂಬಾಲಿಸಿಕೊಂಡು ಬಂದಿದ್ದಾರೆ.

'ಯಾರು... ಯಾರದು?'

ಸೊಯ್ಯನೆ ಗಾಳಿ ಬೀಸಿತು. ಬೃಹದಾಕಾರದ ಮರಗಳು... ಕತ್ತಲು ಆವರಿಸಿರುವ ಕಗ್ಗಾಡಿನ ರಸ್ತೆ. ಪುನಃ ಹೆಜ್ಜೆಗಳ ಶಬ್ದ! ಮಾಂತ್ರಿಕನಿಗೆ ಭಯ ಅಂದರೇನು ಗೊತ್ತಿಲ್ಲ. ತುಸು ಗಡುಸಾಗಿಯೇ 'ಯಾರದು? ಧೈರ್ಯ ಇದ್ದರೆ ನನ್ನ ಮುಂದೆ ಬನ್ನಿ.'

'ರೊಂಯ್' ಎಂಬ ಶಬ್ದ.

ಅಂಗೈ ಅಗಲದ ದಪ್ಪನೆಯ ಕಲ್ಲೊಂದು ಈಗ ರಭಸದಿಂದ ತೂರಿಕೊಂಡು ಬಂದು ಮುಖದ ಮೇಲೆ ಅಪ್ಪಳಿಸಿತು. ನೋವಿನಿಂದ ಕಿರುಚುತ್ತಾ ಹಿಂದಕ್ಕೆ ವಾಲಿಕೊಂಡನು ರುದ್ರಾಗ. ಮೂಗಿನ ಸೆಲೆ ಒಡೆದಿದೆ. ಬಾಯಿಯಿಂದ ರಕ್ತ ಬರುತ್ತಿದೆ. ಯಾರೋ ನುಗ್ಗಿ ಬಂದರು. ಕತ್ತಲಲ್ಲಿ ಮುಖ ಕಾಣುತ್ತಿಲ್ಲ. ಹಿಡಿಗಾತ್ರ ಇದ್ದ ಕಬ್ಬಿಣದ ಸಲಾಕೆ ಅಪ್ಪಳಿಸಿತು. ಈ ಮಾಂತ್ರಿಕನ ಬಾಯಿಯ ಮೇಲೆ. ಮತ್ತೊಂದು ಪ್ರಹಾರ, ಮಗದೊಂದು ಪ್ರಹಾರ, ಚೇತರಿಸಿಕೊಳ್ಳಲು ಸಹ ಬಿಡದಂತೆ, ಅವನು ಹೊಡೆತಗಳನ್ನ ಬರೀ ಬಾಯಿಗೆ ಹೊಡೆದಿದ್ದನು.

ಮೇಲಿನ ಮತ್ತು ಕೆಳಗಿನ ಆರು ಹಲ್ಲುಗಳು ಉದುರಿವೆ. ಎರಡು ದವಡೆ ಹಲ್ಲುಗಳು ಅಲ್ಲಾಡುತ್ತಿವೆ. ರಕ್ತ... ಬಾಯಿ ತುಂಬಾ ರಕ್ತ. ರುದ್ರನಾಗ ಕಿರುಚುತ್ತಿದ್ದಾನೆ. ಯಮಯಾತನೆಯ ಕೂಗು. ಇಡೀ ಅರಣ್ಯ ಕಂಪಿಸುತ್ತಿದೆ. ನೆಲದ ತುಂಬಾ ಹರಡಿಕೊಂಡಿದೆ ರಕ್ತದ ಹನಿಗಳು... ಉದುರಿರುವ ಹಲ್ಲುಗಳು.

ಕತ್ತಿನ ನರದ ಮೇಲೊಂದು ಹೊಡೆತ ಬಿದ್ದ ಕೂಡಲೇ ತಲೆ ಧಿಂ... ಧಿಂ ಎಂದಿತು. ತಲೆಯೊಳಗೆ ದೀಪಾವಳಿಯ ಸಹಸ್ರ ಪಟಾಕಿಗಳ ಸರ ಸಿಡಿಯುತ್ತಿರುವ ಅನುಭವ. ಕುಸಿಯಲಾರಂಭಿಸಿದನು ರುದ್ರನಾಗ. ಪ್ರೇತ ಪಿಶಾಚಿ, ಕ್ಷುದ್ರಶಕ್ತಿಗಳಿಂದ ಆಗದ್ದನ್ನು ಒಬ್ಬ ಮುದುಕ ಮಾಡಿ ಮುಗಿಸಿದ್ದನು.

ಆ ಮುದುಕ ಹಸಿರು ಗಿಡಗಳ ರಾಮಯ್ಯ. ಈ ಮಾಂತ್ರಿಕನಿಂದ ತನ್ನ ಎರಡು ಮಕ್ಕಳನ್ನು ಕಳೆದುಕೊಂಡಿದ್ದ ರಾಮಯ್ಯ ದುಃಖ, ದ್ವೇಷದಿಂದ ಅಲೆಮಾರಿಯಂತೆ ತಿರುಗುತ್ತಿದ್ದನು. ಸೇಡು ತೀರಿಸಿಕೊಂಡಿದ್ದನು. ರಾಮಯ್ಯನ ಪ್ರತಿಜ್ಞೆ ಏನು? ಮಾಂತ್ರಿಕ ಶಕ್ತಿ... ಸಾಮರ್ಥ್ಯ ಇದ್ದರೂ ಸಹ ಅದು ರುದ್ರನಾಗನ ಉಪಯೋಗಕ್ಕೆ ಬರಬಾರದು.

ಅವನು ಮಂತ್ರ ಪ್ರಯೋಗ ಮಾಡಬಾರದು. ಇನ್ನು ಮುಂದೆ ಯಾರನ್ನೂ ಬಲಿ ತೆಗೆದುಕೊಳ್ಳಬಾರದು. ಅದಕ್ಕೆ ಸಮಯ ನೋಡಿಕೊಂಡು ಮಾಂತ್ರಿಕನ ಹಲ್ಲುಗಳನ್ನು ಉದುರಿಸಿದ್ದನು. ಹಲ್ಲುಗಳ್ನು ಕಳೆದುಕೊಂಡ ಮಾಂತ್ರಿಕ ಪುನಃ ಸ್ಮಶಾನಕ್ಕೆ ಹೋಗಲಾರ. ಕೆಲವು ಹಲ್ಲುಗಳು ಅರ್ಧ ಮುರಿದಿದ್ದವು. ಮಂತ್ರಗಳ ಉಚ್ಚಾರದಲ್ಲಿ... ವರ್ಣದಲ್ಲಿ...